ದಿಃ 18-09-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀ. ವಿ ಜೆ ಜಿ ವಕೀಲರಿಂದಃ**

2 ಎಕರೆ 17 ಗುಂಟೆ ಮತ್ತು 5 ಎಕರೆ 10 ಗುಂಟೆ ಆಸ್ತಿಯಲ್ಲಿ ನನ್ನ ತಂದೆ ತೀರಿಕೊಂಡ ನಂತರ ನನ್ನ ಸಹೋದರರ ಹೆಸರು ತಲಾ ಅರ್ಧ ಹಿಸ್ಸೆಯಂತೆ ನಮೂದು ಆಯಿತು ಎಂದರೆ ಗೊತ್ತಿಲ್ಲ. 5 ಎಕರೆ 10 ಗುಂಟೆಯನ್ನು ಅದಲು ಬದಲು ಮಾಡಿ 8 ಎಕರೆ 16 ಗುಂಟೆ ತೆಗೆದುಕೊಂಡ ಆಸ್ತಿಗೂ ನನ್ನ ಸಹೋದರರ ಹೆಸರು ನಮೂದು ಆಗಿದೆ ಎಂದರೆ ಸರಿಯಲ್ಲ. ನವೆಂಬರ 1996ರಲ್ಲಿ 1 ಎಕರೆ 13 ಗುಂಟೆ 8 ಅಣೆ ಮತ್ತು 8 ಎಕರೆ 14 ಗುಂಟೆ ಆಸ್ತಿಯಲ್ಲಿ ನನ್ನ ಸಹೋದರರು ವಿಭಾಗ ಮಾಡಿಕೊಂಡಿದ್ದಾರೆಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ 1 ಎಕರೆ 13 ಎಕರೆ 8 ಅಣೆಯನ್ನು ಪರಪ್ಪಾನಿಗೆ ಕೊಟ್ಟರು ಎಂದರೆ ಸರಿಯಲ್ಲ . ಸದರಿ 8 ಎಕರೆ 14 ಗುಂಟೆಯಲ್ಲಿ ಪೂರ್ವದ 4 ಎಕರೆ 16 ಗುಂಟೆ ಸಿದ್ದಪ್ಪಾನಿಗೆ ಮತ್ತು ಪಶ್ಚಿಮದ 4 ಎಕರೆಯನ್ನು ಪರಪ್ಪಾನಿಗೆ ನೀಡಿದರು ಎಂದರೆ ನನಗೆ ಗೊತಿಲ್ಲ ಎಂದು ಹೇಳುತ್ತಾರೆ. ಸದರಿ ಪಾಲು ವಿಭಾಗದಂತೆ ವರದಿ ನೀಡಿ ತಮ್ಮ ಹೆಸರನ್ನು ನಮೂದಿಸಿಕೊಂಡು ಡೈರಿ ಮಾಡಿಸಿಕೊಂಡಿದ್ದಾರೆಂದರೆ ಸರಿಯಲ್ಲ. ಸದರಿ ವಿಭಾಗದಂತೆ ಅವರು ತಮ್ಮ ತಮ್ಮ ಕ್ಷೇತ್ರಕ್ಕೆ ಸಾದೀನಕ್ಕೆ ಬಂದರು ಎಂದರೆ ಸರಿಯಲ್ಲ.

ನಂತರ ಸಿದ್ದಪ್ಪಾ ತನ್ನ 4 ಎಕರೆ 14 ಗುಂಟೆಯಲ್ಲಿ ದಕ್ಷಿಣದ 39 ಗುಂಟೆಯನ್ನು ಪರಪ್ಪಾನಿಗೆ ಕೊಟ್ಟ ಎಂದರೆ ಗೊತ್ತಿಲ್ಲ ಆದರೆ ಸಾಕ್ಷಿಯೂ ಹಿರಿಯರ ಆಸ್ತಿ ಒಟ್ಟಾಗಿದೆ ಎಂದು ಹೇಳುತ್ತಾರೆ. ಅದರಂತೆ ಡೈರಿಯಾಗಿದೇ ಎಂದರೆ ನಮಗೆ ಗೊತ್ತಾಗದಂತೆ ಮಾಡಿಕೊಂಡಿದ್ದಾರೆ ಎಂದು ಹೇಳುತ್ತಾರೆ. 8 ಎಕರೆ 16 ಗುಂಟೆಯಲ್ಲಿ 4 ಎಕರೆ 39 ಗುಂಟೆ ಪರಪ್ಪಾನ ಕಡೆ ಇದೆ ಮತ್ತು 3 ಎಕರೆ 17 ಗುಂಟೆ ಸಿದ್ದಪಾನ ಕಡೆ ಇದೆ ಎಂದರೆ ಸರಿಯಲ್ಲ.

1 ಎಕರೆ 13 ಗುಂಟೆ 8 ಅಣೆ ಮಹಾದೇವಿ ಕಡೆ ಇದೆ ಎಂದರೆ ಇರಬಹುದು ಆದರೆ ನಮಗೆ ಗೊತ್ತಾಗದ ಹಾಗೇ ಮಾಡಿರುತ್ತಾರೆ. 2005ರಲ್ಲಿ ಪರಪ್ಪಾ ಆ ಆಸ್ತಿಯನ್ನು ಮಹಾದೇವಿಗೆ ಕೊಟ್ಟಿದ್ದು ಆ ಮಹಾದೇವಿ ಸ್ವಾದೀನದಲ್ಲಿ ಇದ್ದಾರೆಂದರೆ ಸರಿಯಲ್ಲ. ನಮಗೆ ಗೊತ್ತಾಗದ ಹಾಗೇ ಮಾಡಿಕೊಂಡಿದ್ದಾರೆಂದು ಹೇಳುತ್ತಾರೆ. ಮಹಾದೇವಿ ತನ್ನ ಹೆಸರು ನಮೂದು ಮಾಡಿಕೊಂಡಿದ್ದಾಳೆ ಎಂದರೆ ನಮಗೆ ಗೊತ್ತಾಗದ ಹಾಗೇ ಮಾಡಿಕೊಂಡಿದ್ದಾಳೆ.

ಸದರಿ ದಾವಾ ಭೂಮಿಗಳಲ್ಲಿ ಈಗಾಗಲೇ ವಿಭಾಗ ಆಗಿದೆ ಎಂದರೆ ಸರಿಯಲ್ಲ. ಆದ್ದರಿಂದ ನಮಗೆ ಪಾಲು ವಿಭಾಗ ಇಲ್ಲ ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗ ನಮಗೆ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಪಾಲು ವಿಭಾಗ ಕಾನೂನ ಬದ್ದವಾಗಿದ್ದು ನಮಗೆ ಬಂಧನಕಾರಿ ಆಗುತ್ತದೆ ಎಂದರೆ ಸರಿಯಲ್ಲ .

ಮನೆಯ ಆಸ್ತಿ ನಂಬರ ಹೇಳಲು ಬರುವುದಿಲ್ಲ. ಬಿ ಶೆಡ್ಯೂಲ್ ಆಸ್ತಿ ನಮ್ಮ ತಂದೆಯ ಆಸ್ತಿ. ದಿನಾಂಕ 26/04/1980 ರಂದು ನಮ್ಮ ತಂದೆ ನೊಂದಾಯಿತ ಕ್ರಯ ಪತ್ರದ ಮುಖಾಂತರ ಆ ಆಸ್ತಿಯನ್ನು 1 ನೇ ಪ್ರತಿವಾದಿಗೆ ಖರೀದಿ ನೀಡಿದ್ದಾರೆಂದರೆ ಗೊತ್ತಿಲ್ಲ. ಸದರಿ ಮನೆಗೆ 1ನೇ ಪ್ರತಿವಾದಿ ಹೆಸರು ನಮೂದು ಇದೆ ಎಂದರೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಮಹಾದೇವಿ ಇರುತ್ತಾಳೆ ಎಂದರೆ ಸರಿ.

ಸಿದ್ದಪ್ಪಾನ ಹೆಂಡತಿ ಮತ್ತು ಪರಪ್ಪಾನ ಹೆಂಡತಿಯರು 8 ಎಕರೆ 16 ಗುಂಟೆ ಭೂಮಿ ಯಲ್ಲಿ ಮನೆ ಕಟ್ಟಿದ್ದಾರೆಂದರೆ ಸರಿ, ಅವರು ಹಿರಿಯರ ಮನೆ ತೆಗೆದು ಕಟ್ಟಿದ್ದಾರೆಂದು ಹೇಳುತ್ತಾರೆ. ಸರ್ಕಾರದಿಂದ ಅವರಿಗೆ ಧನ ಸಹಾಯ ಆಗಿತ್ತು ಎಂದರೆ ಸರಿ. ನನ್ನ ವಾದ ಪತ್ರದಲ್ಲಿ ಹಿರಿಯರ ಮನೆ ತೆಗೆದು ಕಟ್ಟಿದ್ದಾರೆಂದು ಹೇಳಿಲ್ಲ ಆದರೆ ಅಲ್ಲಿ ಹಿರಿಯರ ಮನೆ ಇತ್ತು ಎಂದು ಹೇಳಿಲ್ಲ. ಆ ಎರಡು ಮನೆಗಳು ಸಿದ್ದಪ್ಪಾನ ಹೆಂಡತಿ ಮತ್ತು ಪರಪ್ಪಾನ ಹೆಂಡತಿಯರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿಯೂ ನಿಖರವಾದ ಉತ್ತರ ನೀಡಿರುವುದಿಲ್ಲ. ಅಲ್ಲಿ ಇದ್ದವು ಎಂದು ಹೇಳಲು ಹಿರಿಯರ ಮನೆ ನಂಬರ ಹೇಳಲು ಬರುವುದಿಲ್ಲ.

ದಾವಾ ಆಸ್ತಿಗಳಲ್ಲಿ ನಮಗೆ ಪಾಲು ಇಲ್ಲದಿದ್ದರೂ ಸುಳ್ಳು ದಾವೆ ಹಾಕಿದ್ದೇವೆಂದರೆ ಸರಿಯಲ್ಲ. ವ್ಯಾಜ್ಯ ಕಾರಣ ಇಲ್ಲದಿದ್ದರೂ ಸುಳ್ಳು ಕಾರಣ ತೋರಿಸಿ ದಾವೆ ಹಾಕಿದ್ದೇವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ.ಹೇ. ಕೇ. ಸ. ಇದೆ.

ಪ್ರ.ಹಿ.ದಿ.ನ್ಯಾಯಾಧೀಶರು, ಚಿಕ್ಕೋಡಿ